

ಆರು ಖಂಡುಗ ಪಾಯಸ ಒಂದು ಕ್ವಾರೆಗೆ ಸಾಲಿದರೆ ಇನ್ನೊಂದು ಕ್ವಾರೆಗೆ ಸಾಲದು ಪರಾಕು ಸ್ವಾಮಿ ಬಹುಪರಾಕ್.' ಎಂದು ಆರಂಭವಾದ ಈ ಕಥೆಯು -

'ಶ್ರೀಮನ್ ನಾರಾಯಣನ ದ್ವಾರ ಪಾಲಕರಾದ ಜಯ-ವಿಜಯರು, ಸನಕಾದಿ ಮಹರ್ಶಿಗಳನ್ನು ವೈಕುಂಠ ದ್ವಾರದಲ್ಲಿ ತಡೆಯಲು, ಬಹುಪರಾಕ್... ಆ ಸನಕಾದಿಗಳನ್ನು ಜಯ-ವಿಜಯರಿಗೆ ಶಾಪವನ್ನು ಇತ್ತರು.ಬಹುಪರಾಕ್... ಆಗ ಹೆದರಿದ ಜಯ-ವಿಜಯರು ಶ್ರೀಮನ್ ನಾರಾಯಣನ ಬಳಿ ಹೋಗಿ ಈ ಶಾಪವಿಮೋಚನೆ ಬಗ್ಗೆ ಕೇಳಲಾಗಿ ಬಹುಪರಾಕ್...ಆಗ ಶ್ರೀ ಹರಿಯು ಏಳು ಜನ್ಮ ನನ್ನ ಮಿತ್ರರಾಗಿರುವಿರೋ, ಮೂರು ಜನ್ಮ ನನ್ನ ವೈರಿಗಳಾಗಿರುವಿರೋ ಎಂದನು. ಬಹುಪಾರಾಕ್... ಮೂರು ಜನ್ಮ ವೈರಿಗಳಾದರೂ ಸರಿ ನಿಮ್ಮನ್ನು ಬಿಟ್ಟು ಹೆಚ್ಚು ಜನ್ಮ ಇರಲಾರೆವು ಸ್ವಾಮೀ ಎಂದಾಗ ಹಿರಣ್ಯ ಕಶಿಪು-ಹಿರಣಾಕ್ಷನ ಅವತಾರವಾಯಿತು ಗೋವಿಂದೋ... ಪರಾಕು ಸ್ವಾಮೀ ಪರಾಕು.. ಶಂಕ-ಬಾನಕೆ ಊದಿ ಜಾಗಟೆ ಬಡಿದ ಜನವೆಲ್ಲಾ ಬಹುಪರಾಕ್... ಅಂತು. ಹೀಗೆ ಭೂಮಿಯಲ್ಲಿ ಹುಟ್ಟಿದ ಹಿರಣ್ಯ ಕಶಿಪುವಿನ ತಮ್ಮನಾದ ಹಿರಣ್ಯಾಕ್ಷನು ಭೂ ದೇವಿಯನ್ನು ಅಪಹರಿಸಿ ಬಹುಪರಾಕ್ರೀ.. ಮನ್ನಾರಾಯಣನು ಬರದಿರುವ ಜಾಗವನ್ನು ಹುಡುಕಿ ಸೋತನು. ಬಹುಪರಾಕ್... ಆಗ ಉಪಾಯಮಾಡಿ ಒಂದು ಹೇಸಿಗೆ ಕೋಟೆಯನ್ನು ಕಟ್ಟಿ ಭೂದೇವಿಯನ್ನು ಅಪಮಾನಿಸುತ್ತಿರಲು ಬಹುಪರಾಕ್ ಹೇಸಿಗೆ ಕೋಟೆಯೊಳಗೆ ನುಗ್ಗಲಾರದ ಚೊಕ್ಕ ಭೋಜನದಯ್ಯನಾದ ನಾರಾಯಣನು ಕೆಲಕಾಲ ದಿವ್ಯ ಗ್ಯಾನುವ ಮಾಡಿ ಹೇಸಿಗೆಯನ್ನು ತಿನ್ನುವ ಹಂದಿಯ ರೂಪವನ್ನೇ ಧರಿಸಿ ಬಹುಪರಾಕ್ ಆ ಹೇಸಿಗೆ ಕೋಟೆಯನ್ನು ಒಂದೇ ಗುಕ್ಕಿಗೆ ನುಂಗಿ, ಹಿರಣ್ಯಾಕ್ಷನನ್ನು ಸಂಹರಿಸಿ, ಭೂದೇವಿಯನ್ನು ರಕ್ಷಿಸಿದನು ಪರಾಕುಸ್ವಾಮೀ ಪರಾಕ್' ಅಂದಾಗ ಜನವೆಲ್ಲಾ ಬಹುಪರಾಕ್... ಅಂತು. ತಾಲೋಕಿನಲ್ಲೇ ಫೇಮಸ್ ಆಗಿರುವ ಶ್ರೀನಿವಾಸ ದೇವಾಲಯದ ಅರ್ಚಕರಾದ